Dec-61
BP-2

ವರ್ತಮಾನ ಸಂಗ್ರಹ

ಸಿಂಧ್ ಶಾಸನ ಸಭೆಯ ಲೀಗ್ ಪಕ್ಷದ ನಾಯಕರಾಗಿ ಪೀರ್ ಇಲ್ಲಾಹಿ ಭಕ್ಷ್ ಚುನಾಯಿತರಾದರು

ಅಂಗಸಾನರ ಕೊಲೆಪಾತಕ ಯು ಸಾ ಅಪೀಲು ಅರ್ಜಿ ರದ್ದಾಗಿ ಮರಣ ದಂಡನೆ ಖಚಿತವಾಯಿತು

ಕೇಂದ್ರ ಸುಕಾಠದ ರಕ್ಷಣಾ ಸಚಿವ ಸರ್ದಾರ್ ಬಲದೇವಸಿಂಗ್ ತಾ ॥ 7 ರಲ್ಲಿ ಬೆಂಗಳೂರಿಗೆ ಬರುವರು ॥

ಮೇ 27 ರಲ್ಲಿ ದ. ಆಫ್ರಿಕೆಯಲ್ಲಿ ಜರಗುವ ಮಹಾಚುನಾವಣೆಯಲ್ಲಿ ಸ್ಮಟ್ಸ್ ಮತ್ತು ಇತರ ಸಚಿವರಿಗೆ ಪ್ರಬಲ ವಿರೊಧವಿದೆ;

ನಿಜಾಂಘೋಷಣೆಯಲ್ಲಿ ತಿರುಳಿಲ್ಲವೆಂದು ಹೈದರಾಬಾದು ಹಿಂದೂ ಮಹಾಸಭೆ ನಿರ್ಣಯ ಅಂಗೀಕರಿಸಿದೆ

ಸಂಸ್ಥಾನಾದ್ಯಂತ ಅಡಚಣೆಯಿಲ್ಲದೆ ಪಬ್ಲಿಕ್ ಪರೀಕ್ಷೆ ಜರಗಿತ್ತಿದೆ

Mysore City Municipality

MYSORE

Notification

Sealed tenders will be received up to 4 p. m. on 30-4-48 by the Municipal Engineer for providing 7½ H. P Electric Pump for the step well near the Dry Cattle Shed in the Municipal Farm.

Eech tender must be accompanied with a Chellan for having remitted Rs. 60 to the Municipal Treasury as earnest money.

For full particulars please see the Notification on the Office Notice Board.

S. Narayanaswamy
Municipal Engineer

Reg...

ಸಮರಾಜಿ

(ಅರಮನೆ ಸಿರಸ್ತೇದಾರ್ ಎಂ. ವಿ. ಸುಬ್ಬರಾಯರಿಂದ ಸ್ಥಾಪಿಸಲ್ಪಟ್ಟುದು)

ಸಂಪುಟ 31 ಸಂಚಿಕೆ 146] ಬುಧವಾರ 28—4—48 [ಬಿಡಿ ಪ್ರತಿ 3 ಪೈ

ಮೈಸೂರು ಸರಕಾರಕ್ಕೆ ಕೇಂದ್ರ ಸರಕಾರದ ಸಂಪೂರ್ಣ ಬೆಂಬಲ

— ಡಾ ॥ ಮುಖರ್ಜಿಯವರ ಭರವಸೆ —

ಬೆಂಗಳೂರು ಏ 28— ಸರಕಾರದ ಅಡಳಿತ ಕಛೇರಿ ಅಂತ್ಯ ಹಂತದಲ್ಲಿನ ಶಾಸನ ಸಭಾ ಭವನದಲ್ಲಿ ಸಂಸ್ಥಾನದ ಕೈಗಾರಿಕಾ ಮತ್ತು ಕಾರ್ಮಿಕ ಸಮ್ಮೇಳನ ಈ ಮಧ್ಯಾಹ್ನ 2—30 ಗಂಟೆಗೆ ಸರಿಯಾಗಿ ಆರಂಭವಾಯಿತು. ಈ ತ್ರಿಪಕ್ಷ ಪರಿಷತ್ತಿನಲ್ಲಿ ಸರಕಾರ—ಮಾಲೀಕ—ಕಾರ್ಮಿಕ ಪ್ರತಿನಿಧಿಗಳು ಭಾಗವಹಿಸಿದ್ದಾರೆ.

ಸಂಸ್ಥಾನ ಶಾಸನ ಮತ್ತು ಕಾರ್ಮಿಕ ಸಚಿವ ಶ್ರೀ ಭಾಷ್ಯಂರವರು ತ್ರಿಪಕ್ಷ ಪ್ರತಿನಿಧಿಗಳಿಗೆ ಸ್ವಾಗತ ಕೋರುತ್ತಾ 'ದೆಹಲಿ ತ್ರಿಪಕ್ಷ ಪರಿಷತ್ತಿನಿಂದ ಕಾರ್ಮಿಕ ಮತ್ತು ಮಾಲೀಕರಲ್ಲಿ ಒಂದು ವಿಧವಾದ ಒಪ್ಪಂದವಾಗಿದೆ ಆದ ಕಾರಣ ಕಾರ್ಮಿಕ ಮತ್ತು ಮಾಲೀಕರಿಗೆ ಶುಭವಾಗುತ್ತೆಯಿದೆ. ಇದೇ ರೀತಿ ಎರಡು ದಿವಸ ನಾವು ಚರ್ಚಿಸಿ ಕೈಗಾರಿಕಾ ಒಪ್ಪಂದದ ಒಗೆಗೆ ಸೂಕ್ತ ಕಾರ್ಯ ತೆಗೆದುಕೊಳ್ಳಬೇಕು' ಎಂದರು.

ಸಂಸ್ಥಾನದ ದಿವಾನ್ ಸರ್ ಅಕ್ಬರ್ ಹೈದರಿ ಸಮ್ಮೇಳನ ಉದ್ಘಾಟಿಸುತ್ತಾ 'ಇಲ್ಲಿ ಸೇರಿರುವ ಸಮ್ಮೇಳನ ಇತಿಹಾಸ ಪ್ರಸಿದ್ಧವಾದದ್ದು. ಅಂತರರಾಷ್ಟ್ರೀಯ ವಾಗಿ ಇಂತಹ ಸಮ್ಮೇಳನ 1920 ರವರಿಗೆ ಸೇರಿರಲಿಲ್ಲ. ಗೃಹ ಕೈಗಾರಿಕೆ ಪ್ರಗತಿ ಹೊಂದಬೇಕು. ದೇಶದ ಆಧಾರ ವ್ಯವಸಾಯ ಮುಂದುವರಿಯಬೇಕು. ಕಾರ್ಮಿಕನೆಂಬ ಕನಿಷ್ಠ ಭಾವನೆ ಹೊರಟುಹೋಗಬೇಕು ; ಕಾರ್ಮಿಕನಿಲ್ಲದ ಕೈಗಾರಿಕೆಯೇ ಇಲ್ಲ ; ಕೈಗಾರಿಕೆಯಿಂದ ಸರಕಾರಕ್ಕೂ ಲಾಭ ದೊರೆಯಬೇಕು' ಎಂದು ತಿಳಿಸಿದರು.

'ಕೇಂದ್ರ ಪ್ರಭುತ್ವ ಕೈಗಾರಿಕಾ ಸಚಿವ ಡಾ ॥ ಶ್ಯಾಮಪ್ರಸಾದ್' ಮುಖರ್ಜಿ ಕೈಗಾರಿಕೋದ್ಯಮಿಗಳಿಗೆ ಕರೆ ಕೊಡುತ್ತಾ 'ಸಂಸ್ಥಾನ ಪ್ರಾಂತ್ಯಗಳ ಕೈಗಾರಿಕೆಗಳು ಕೇಂದ್ರದಲ್ಲಿ ಕೇಂದ್ರೀಕೃತವಾದರೆ ಮಾತ್ರ ಉಳಿಗಾಲ. ಭಾರತದ ಯಾವ ಪ್ರಾಂತ್ಯದ ಒಂಡವಾಳವನ್ನು ಪರದೇಶ ಬಂಡವಾಳ ಎಂದು ಕರೆಯುವುದು ತಪ್ಪು. ಸಮಾತಾವಾದದ ಈ ಯುಗದಲ್ಲಿ ಕಾರ್ಮಿಕನಿಗೆ ಸರಿಯಾದ ಸೌಕರ್ಯ ದೊರೆಯಬೇಕು ವ್ಯಾಜ್ಯ ತಲೆ ದೋರಿದರೆ ಪಂಚಾಯಿತಿ ಮೂಲಕ ಕೂಡಲೇ ತೀರ್ಮಾನವಾಗಬೇಕು. ಕೈಗಾರಿಕಾ ಕ್ಷೇತ್ರದಲ್ಲಿ ಶಾಂತಿ ಸೌಖ್ಯ ವಿರಬೇಕು : ಕೇಂದ್ರ ಸರಕಾರದ ಸಹಕಾರ ನಿಮಗೆ ಎಂದೆಂದಿಗೂ ಉಂಟು' ಎಂದರು

ವುಡ್ ಲ್ಯಾಂಡ್ಸ್

28—4—48 ರಿಂದ

A V A Z

ಸ್ವರ್ಣಲತಾ, ಮಾಯಾಬ್ಯಾನರ್ಜಿ ವಾಸ್ತ್ರಿ ಪಾತ್ರವಹಿಸಿರುವ

ಅ ವಾ ಜ್

(ಆಲೀಪ್ ಹಿಂದಿ ಚಿತ್ರ)

ಪ್ರ ಭಾ

30—4—48 ರಿಂದ — ದಿನವಹಿ 3 ಆಟಗಳು

.... ಪ್ರಭಾತ್ ರವರ ....

ಹಂ — ಏಕ್ — ಹೈ

(ಹಿಂದಿ)

ಭೂಮಿಕೆ— ರೆಹಮಾನ್ ಕಮಲಾ ಕೋಟ್ನಿಸ್

ಪತ್ರಿಕಾ ಪರಿಚಯ

ನ್ಯೂ ಯಾರ್ಕ್ ಟೈಮ್ಸ್

ನ್ಯೂಯಾರ್ಕ್ ನಗರದಲ್ಲಿಯೇ ದಿನಂ ಪ್ರತಿ ಈ ಪತ್ರಿಕೆಯ ಐದೂವರೆ ಲಕ್ಷ ಪ್ರತಿಗಳು ಮಾರಾಟವಾಗುತ್ತವೆ. ಒಟ್ಟು ಸರ್ಕುಲೇಷನ್ನಿನಲ್ಲಿ ನಾಲ್ಕರಲ್ಲಿ ಒಂದು ಭಾಗ ಈ ನಗರದಲ್ಲಿಯೇ ಬಿಕರಿಯಾಗುತ್ತವೆ. ಭಾನುವಾರದ ಪತ್ರಿಕೆಗೆ ಹತ್ತು ಲಕ್ಷಕ್ಕೆ ಮಿಗಿರಿದ ಓದುಗರು ಇದ್ದಾರೆ. ಸಂಯುಕ್ತ ಅಮೇರಿಕಾ ಕಾಂಗ್ರೆಸ್ಸಿನವರಿಗೆಲ್ಲರೂ ಇದನ್ನು ಶ್ರದ್ಧೆಯೊಡನೆ ಓದುತ್ತಾರೆ.

ಈ ಪತ್ರಿಕೆಯು ಪ್ರಾರಂಭವಾದುದ್ದು 1851 ರಲ್ಲಿ. ಅದರ ಅಭಿವೃದ್ಧಿಯು 1896 ರಿಂದ ಪ್ರಾರಂಭವಾಯಿತು. ಈಗ ಆ ಕಛೇರಿಯಿಂದ ಕೆಲಸ ಮಾಡುತ್ತಿರುವ ಪತ್ರಿಕೆಯಲ್ಲಿ 40 ಪುಟಗಳಿವೆ. ಭಾನುವಾರದ ಪತ್ರಿಕೆಯಲ್ಲಿ 200 ಪುಟಗಳಿಗಿಂತ ಹೆಚ್ಚಾಗಿರುತ್ತವೆ.

ಈಗಿನ ಪತ್ರಿಕಾ ಸಂಪಾದಕರು ಎಡ್ವಿನ್ ಜೇಮ್ಸ್. ಇತನು 31 ವರ್ಷಗಳ ಹಿಂದೆ ಕಾಪೀ ರೀಡರ್ ಆಗಿ ಈ ಆಫೀಸಿನಲ್ಲಿ ಸೇರಿದಾತನು ಪ್ರಪಂಚದ ಎಲ್ಲಾ ಭಾಗಗಳಿಂದ ಟೈಮ್ಸ್ ಭವನದ ವರಾಂಡಯು ಅಂತಸ್ತಿಗೆ ಸಮಾಚಾರಗಳು ಬಂದು ಸೇರುತ್ತವೆ. ರೇಡಿಯೋ ಟೆಲಿಫೋನು ಮೂಲಕ ಸಮಾಚಾರಗಳನ್ನು ಪ್ರಚುರಿಸಬಲ್ಲವರಾಗಿರುವರು. ಎಲೆಕ್ಟ್ರಿಕ್ ಟೈಪುರೈಟರುಗಳ ಮೇಲೆ ಟೆಲಿಗ್ರಾಫು ತಂತಿಗಳಿಂದ ಸಮಾಚಾರಗಳು ಬರೆಯಲ್ಪಡುವುದು. ಒಂದು ಆಟೋಮ್ಯಾಟಿಕ್ ರೇಡಿಯೋ ಸಿಸೀವರ್ ಇದೆ ಅದರ ಸಮಾಸದಲ್ಲಿಯೇ ಇಂಗ್ಲೀಷಿಗೆ ಭಾಷಾಂತರವು ಸ್ವತಃ ಲಿಖಿತವಾಗಿರುತ್ತದೆ.

ಸೌಂಡ್ ಪ್ರೂಫ್ ವೈರುಗಳಲ್ಲಿ ನಾಲ್ಕು ಆಟೋಮೊಟಿಕ್ ರಿಸೀವರುಗಳಿರುತ್ತವೆ. ಈ ಎಲ್ಲಾ ಟೆಲಿಫೋನು ರಿಪೋರ್ಟುಗಳನ್ನು ರೆಕಾರ್ಡ್ ಮಾಡಲಾಗುತ್ತವೆ. ಟೈಪಿಸ್ಟುವಾಗಿದ್ದು ಆ ಟೇಪನ್ನು ಇನ್ನೊಂದು ಯಂತ್ರದಲ್ಲಿಟ್ಟಲ್ಲಿ ಮೊದಲಿನಂತೆ ಕೇಳಿಬರುತ್ತದೆ.

ಸಮಾಚಾರಗಳನ್ನು ಆಫೀಸಿನಲ್ಲಿ ತರುವುದು ಟೈಮ್ಸ್ ನೇವ್ ರೇಡಿಯೋ. ಅದರ ಮೂಲಕ ಯ ಸೈಳದಿಂದ

ಗಳು ಮತ್ತು ವೆ. ಟಿಲಿಫೋನು ತಂತಿಯ ದ್ವಾರ ಫೋಟೋಗಳನ್ನು ಸೆರಿಸುತ್ತದೆ. ತಮ್ಮ ಫೋಟೋಗ್ರಾಫರುಗಳಿಗೆ ಫೋಟೋ ತೆಗೆದ ಸ್ಥಳದಲ್ಲಿಯೇ ಡೆವಲಪ್‌ಮಾಡಿ ಪ್ರಿಂಟು ಮಾಡಲು ಅನುಕೂಲವಾಗಲು ಒಂದು ಫೋಟೋ ಕ್ಯಾಮರ ಕೊಟ್ಟಿರುವರು, ಡೆವಲಪ್ ಮಾಡಿದ ಫೋಟೋಗಳನ್ನು ಟ್ರಾನ್ಸ್ ಎಂಟರು ಮೂಲಕ ನ್ಯೂ ಯಾರ್ಕಿಗೆ ಕಳುಹಿಸುವದು. ಪಾದ ಒಲವು ನಿಮಿಷಗಳೊಳಗಾಗಿ ಫೋಟೋ ಪ್ರೆಸ್ಸಿಗೆ ಹೋಗುತ್ತದೆ.

19 ನ್ಯೂಸ್ ಏಜೆನ್ಸಿಗಳು ಸಮಾಚಾರವನ್ನು [illegible]ತ್ತವೆ. 400 ಮಂ[illegible]ನಾರರೂ ಸಮಾಚಾರ [illegible]ಸುವವರೂ ನ್ಯೂಯಾ[illegible]ದರಲ್ಲೇ ಇರುವರು, [illegible]ೇ ಲೇಖಕರು 100 ಇದ್ದಾರೆ. ಸಮಾಚಾರಗಳನ್ನು ನೋಡಿಕೊಳ್ಳಲು ಆರು ಮಂದಿ ಎಡಿಟರುಗಳಿದ್ದಾರೆ ; ಒಬ್ಬೊಬ್ಬ ಎಡಿಟರಿಗೆ 14 ಮಂದಿ ಸಹಾಯಕರಿದ್ದಾರೆ.

ರಾತ್ರಿ 11 ಗಂಟೆಗೆ ಪತ್ರಿಕೆಯ ಮೊದಲನೆ ಎಡಿಷನ್ ಅಚ್ಚಾಗುತ್ತದೆ ; ಒಂದು ಗಂಟೆಗೆ ಎರಡನೇ ಎಡಿಷನ್ ಸಿದ್ಧವಾಗುತ್ತದೆ ; ಮೂರನೇದು ಎರಡೂವರೆ ಗಂಟೆಗೆ ಹೊರಡುತ್ತದೆ. ಮಾನೇಜಿಗು ಎಡಿಟರು ಸಾಧಾರಣವಾಗಿ ರಾತ್ರಿ 3-50ಕ್ಕೆ ಮನೆಗೆ ಹೋಗುತ್ತಾನೆ.

ವುಸ್ತಕಗಳ ವಿಮರ್ಶೆಯು 2ನೆ ಪೇಜಿನಲ್ಲಿರುತ್ತದೆ ಅದನ್ನು ಓದುವದ್ದಿಂದಲೇ ವಿಮರ್ಶೆ ಮಾಡಿದ ಗ್ರಂಥಗಳ ಅನೇಕ ವಿಚಾರಗಳನ್ನು ಅರಿತುಕೊಳ್ಳಬಹುದು. ನಾಟಕ, ಸ್ಪೇಜು, ಸಂಗೀತ ಕಲೆಗಳ ವಿಷಯವು 16 ನೇ ಪುಟದಲಿರುತ್ತದೆ.

ತಿಂಗಳಿಗೆ 20 ಲಕ್ಷ ಡಾಲರಿಗಿಂತ ಹೆಚ್ಚು ಲಾಭವು ಈ ಪತ್ರಿಕೆಗೆ ಬರುತ್ತದೆ. ಇದರಲ್ಲಿ ಪ್ರಕಟಿಸುವ ಜಾಹಿರಾತುಗಳಲ್ಲಿ 'ಆತ್ಯುತ್ತಮ' 'ಅತಿ ಸುಂದರ' ಮೊದಲಾದ ಪದಗಳನ್ನು ಉಪಯೋಗಿಸಕೂಡದೆಂಬ ನಿಯಮವಿದೆ.

ಪ್ರತಿದಿನವೂ ಈ ಆಫೀಸಿಗೆ ತಾವು ಕಳುಹಿಸಿದ ಸಮಾಚಾರಗಳನ್ನು ಪ್ರಕಟಿಸಲ್ಲವೆಂದು 1600 ತಾತ್ಪರ್ಯಗಳು ಬರುತ್ತವೆ.

'ದಿಸ್ ಮಂತ್' ನಿಂದ
ಹಂಕ್ಷೇಪಿಸಿದೆ

OFFICE OF

The Municipal Engineer

City Municipal Council

Mysore, Dated 14-4-48

Notification

Sealed tender will be received up to 4 p. m. on 1 st May 1948 by the Municipal Engineer, for Converting the Old Toddy Shop into Market in Nazarbad, Mysore,

Each tender should be accompanied with a Challan for having remitted Rs. 290 in the Municipal Treasury as earnest money.

For full particulars please see the detailed notification on the Notice Board.

S. Narayanaswamy
Municipal Engineer
Mysore

ಮೈಸೂರು ಸಿಟಿ ರೇಷನಿಂಗ್

No. R 6 - 81 / 48

1948 ನೇ ಇಸವಿ ಏಪ್ರಿಲ್ ಮಾಹೆ 30 ನೇ ತಾರೀಖಿನ ದಿವಸ ಮೈಸೂರು ಸಿಟಿಯಲ್ಲಿರುವ ಎಲ್ಲಾ ಸರ್ಕಾರಿ ಡಿಪೋ ಮೊಹಲ್ಲಾ ಸಬ್ ಗೋಡೌನ್, ವರ್ತಕರ ಡಿಪೋ ಮತ್ತು ಸಹಕಾರ ಸಂಘಗಳಲ್ಲಿಂದಿನ ದಿನಸಿಗಳ ಎಣಿಕೆ ಮಾಡಬೇಕಾಗಿರುವುದರಿಂದ ಆ ದಿವಸ ಡಿಪೋಗಳೇ ಮುಚ್ಚಲ್ಪಡುತ್ತವೆ.

(ಸಹಿ) ಎಂ. ಶ್ರೀನಿವಾಸಲು ನಾಯುಡು
ರೇಷನಿಂಗ್ ಆಫೀಸರ್
22-4-48 ಮೈಸೂರು ಸಿಟಿ

At Opera

20—4—48 ರಿಂದ

ಪ ನ್ನ

[ಹಿಂದಿ)

ಪಾತ್ರ— ಗೀತಾಸಿಜಾಮಿ, ಜೈರಾಜ್

Edited, Printed and Published by M S Krishna Rao at the Satyavadi Press, Chamaraj Agrahar, Mysore

ಲಂಡನ್ ಕೌಂಟಿ ಹಾಲಿನಲ್ಲಿ 460 ಎಕ್ಸ್-ರೇಗಳಿವೆ

Advertise in 'Satyavadi'

ಹೊಸ ಬೆಳೆಯು, ಆರಿಸಿ ತೆಗೆದ, ಪರಿಶುದ್ಧವಾದ

ಶ್ರೀ "ಓಂ" ಗುರುತಿನ ಕೇಸರಿ

ಈ ಓಂ ಗುರುತಿನ ಕೇಸರಿ ಅತಿ ಪರಿಶುದ್ಧವಾದುದಕ್ಕೆ ಗ್ಯಾರಂಟಿಯಾಗಿದ್ದುದು. ಸ್ಪೇನಿನ ಕೇಸರಿ ಗಿಡಗಳಲ್ಲಿಯ ಹೂಗಳಿಂದ ಆರಿಸಿ ತೆಗೆದುದಾಗಿದೆ. ನಮ್ಮಿಂದ ಸ್ಪೆಷಲ್ಲಾಗಿ ಆಮದು ಮಾಡಲ್ಪಟ್ಟಿರತಕ್ಕದ್ದು. ಬಹು ಹೊಳಪಿನಿಂದಲೂ ಸುವಾಸನೆಯಿಂದಲೂ ಕೂಡಿದುದಾಗಿದೆ ಏನೊಂದೂ ಅಕ್ಷೇಪಣೀಯ ಪದಾರ್ಥಗಳೂ ಸೇರಿಲ್ಲ, ಮತ್ತು ಧಾರ್ಮಿಕವಾಗಿ ಪರಿಶುದ್ಧವಾಗಿದೆ. ದೇವಸ್ಥಾನಗಳಲ್ಲಿಯೂ, ದೇವರ ಪೂಜೆಗೂ, ಔಷಧಗಳಿಗೂ, ಮತ್ತು ತಿಂಡಿಪದಾರ್ಥಗಳಿಗೂ ಉಪಯೋಗಿಸಲ್ಪಡಲು ಅರ್ಹವಾಗಿದೆಯೆಂದು ಶಿಫಾರಸ್ಸು ಮಾಡಲಾಗಿದೆ. 1 ತೋಲಾ, 5 ತೋಲಾ, ಡಬ್ಬಿಗಳಲ್ಲಿಯೂ, ಚಿಲ್ಲರೆಯಾಗಿಯೂ ದೊರೆಯುತ್ತದೆ. ಉಪಯೋಗಿಸಬೇಕಾಗಿ ವಿನಂತಿ.

ವಲ್ಲಭದಾಸ್ ತೇಜ್‌ಪಾಲ್
೧೪ ಗೋವಿಂದಪ್ಪ ನಾಯಕ್ ರಸ್ತೆ, ಜಿ. ಟಿ. ಮದರಾಸು